# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ -153 ಜಯನಗರ ವಾರ್ಡ್ ಸಭೆಯ ನಡವಳಿ

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಜಯನಗರ ವಾರ್ಡ್-153 ರಲ್ಲಿ ವಾರ್ಡ್ ಸಭೆಯನ್ನು ಮಾನ್ಯ ಶ್ರೀಮತಿ. ವರಲಕ್ಷ್ಮಮ್ಮ ಎಲ್. ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಅದ್ಯಕ್ಷರ ಅಪ್ಪಣೆ ಮೇರೆಗೆ ದಿನಾಂಕ:26/11/2021 ಶುಕ್ರವಾರದಂದು ಮಧ್ಯಾಹ್ನ 3.00 ಗಂಟೆಗೆ ವಾರ್ಡ್ ಕಮಿಟಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಸದಸ್ಯರಿಗೆ ಆಹ್ವಾನ ನೀಡಿದ್ದು, ಸಭೆಗೆ ಹಾಜರಾಗಿರುವ ಎಲ್ಲರಿಗೂ ಸ್ವಾಗತ ಕೋರುತ್ತಾ, ಸಭೆಯನ್ನು ನಡೆಸಲಾಯಿತು.

**ಹಾಜರಿದ್ದವರು:-**

1. ಶ್ರೀಮತಿ. ವರಲಕ್ಷ್ಮಮ್ಮ ಎಲ್. ನೋಡಲ್ ಅಧಿಕಾರಿ ರವರು.
2. ಶ್ರೀ. ನವೀನ್‌ಕುಮಾರ್ ಕೆ. ಕಿರಿಯ ಅಭಿಯಂತರರು.
3. ಶ್ರೀ. ವಿಜಯಕುಮಾರ್, ಕಿರಿಯ ಅಭಿಯಂತರರು (ಬೆಸ್ಕಾಂ)
4. ಶ್ರೀ. ಸುನಿಲ್‌ಕುಮಾರ್, ಸಹಾಯಕ ಅಭಿಯಂತರರು (BWSSB)
5. ಶ್ರೀ. ರವೀಂದ್ರ ಹಿಜೇರಿ ಹಿರಿಯ ಆರೋಗ್ಯ ಪರಿವೀಕ್ಷಕರು.
6. ಶ್ರೀ. ಮಲ್ಲಿಕಾರ್ಜುನ ಗೌಡ, ಜಲ ಪರಿವೀಕ್ಷಕರು.
7. ಶ್ರೀ. ಚನ್ನೇಗೌಡ ಎ.ಎಸ್.ಐ, ಮೈಕೋ ಲೇಔಟ್ ಸಂಚಾರ ಪೊಲೀಸ್ ಠಾಣೆ.
8. ಶ್ರೀ. ಮಲ್ಲಪ್ಪ ಪಿ.ಸಿ, ಮೈಕೋ ಲೇಔಟ್ ಸಂಚಾರ ಪೊಲೀಸ್ ಠಾಣೆ.
9. ಶ್ರೀ. ಆನಂದಯ್ಯ, ಎ.ಎಸ್.ಐ. ಬಸವನಗುಡಿ ಸಂಚಾರ ಪೊಲೀಸ್ ಠಾಣೆ.
10. ಶ್ರೀ. ನಾರಾಯಣಪ್ಪ ಎ.ಎಸ್.ಐ. ಸಿದ್ಧಾಪುರ ಪೊಲೀಸ್ ಠಾಣೆ.
11. ಶ್ರೀ. ಮಿಥುನ್ ಬಿ.ಸಿ & ಶ್ರೀ. ಭೀಮಪ್ಪ ಸಾರ್ವಜನಿಕರು.

*********

1. ವಾರ್ಡ್-153 ರ ಕುಂದು ಕೊರತೆಗಳ ಬಗ್ಗೆ ಚರ್ಚಿಸುವ ಸಂಬಂಧ ದಿನಾಂಕ:26/11/2021 ಶುಕ್ರವಾರದಂದು ಮಧ್ಯಾಹ್ನ 3.00 ಗಂಟೆಗೆ ನಿಗಧಿತ ಸಮಯಕ್ಕೆ ಸಭೆಯನ್ನು ಪ್ರಾರಂಭಿಸಲಾಯಿತು.



Scanned with CamScanner

2. ನೋಡಲ್ ಅಧಿಕಾರಿಯವರು ಮಾತನಾಡಿ ಹಾಲಿ ಮಳೆಗಾಲ ಪ್ರಾರಂಭವಾಗಿರುವುದರಿಂದ ಸಾಂಕ್ರಾಮಿಕ ರೋಗಗಳಾದ ಡೆಂಗ್ಯೂ ಮಲೇರಿಯಾ ಚಿಕುಂಗುನ್ಯ ಹೆಚ್ಚುತ್ತಿರುವುದರಿಂದ ವಾರ್ಡ್ ವ್ಯಾಪ್ತಿಯ ಕೊಳಚೆ ಪ್ರದೇಶಗಳಲ್ಲಿ ಹಾಗೂ ವಸತಿ ಸಮುಚ್ಛಯಗಳು ಹಾಗೂ ವಸತಿ ಪ್ರದೇಶಗಳಲ್ಲಿ ಔಷದಿ ಸಿಂಪಡಿಸುವಂತೆ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಿದರು.

ಕ್ರಮ : ಸ.ಕಾ.ನಿ.ಅ (ಘನತ್ಯಾಜ್ಯ ನಿರ್ವಹಣೆ)
ಆರೋಗ್ಯ ವೈದ್ಯಾಧಿಕಾರಿಗಳು (ಚಿಕ್ಕಪೇಟೆ)

3. ವಾರ್ಡ್ 153ರ ಸ್ಥಳೀಯರಾದ ಶ್ರೀ. ಮಿಥುನ್ ರವರು ಮಾತನಾಡಿ 9ನೇ ಮುಖ್ಯರಸ್ತೆ ಹಾಗೂ 9ನೇ "ಎ" ಮುಖ್ಯರಸ್ತೆಯಲ್ಲಿ ಕಸವನ್ನು ಸರಿಯಾಗಿ ಗುಡಿಸುತ್ತಿಲ್ಲ ಹಾಗೂ ಕಸ ವಿಲೇವಾರಿ ಸಮರ್ಪಕವಾಗಿ ಆಗುತ್ತಿಲ್ಲವೆಂದು ದೂರಿದರು ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಕಿರಿಯ ಮತ್ತು ಹಿರಿಯ ಆರೋಗ್ಯ ಪರಿವೀಕ್ಷಕರು ಈ ಬಗ್ಗೆ ಪರಿಶೀಲಿಸಿ ದೈನಂದಿನ ಕಸ ವಿಲೇವಾರಿಯ ಬಗ್ಗೆ ಗಮನ ಹರಿಸುವಂತೆ ಸೂಚನೆ ನೀಡಿದರು.

ಕ್ರಮ : ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷರು
ಮತ್ತು ಮಾರ್ಷಲ್ ರವರು

4. ವಾರ್ಡ್ 153ರ ಸ್ಥಳೀಯರಾದ ಶ್ರೀ. ಮಿಥುನ್ ರವರು ಮಾತನಾಡಿ 9ನೇ ಮುಖ್ಯರಸ್ತೆಯ ವಾರ್ಡ್ ಕಛೇರಿ ಮುಂಭಾಗ ಮತ್ತು ಹಿಂಭಾಗ ರಸ್ತೆಗಳಲ್ಲಿ ಸುಮಾರು ವರ್ಷಗಳಿಂದ ಅನಧಿಕೃತವಾಗಿ ವಾಹನ ನಿಲುಗಡೆಯಾಗಿದ್ದು, ಇದರಿಂದ ಯತೇಚ್ಛವಾಗಿ ಕಸ ಶೇಖರಣೆಯಾಗುತ್ತಿದ್ದು, ತೊಂದರೆಯಾಗುತ್ತಿರುವಾಗಿ ದೂರಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಸಂಬಂಧಪಟ್ಟ ಸಂಚಾರ ಪೊಲೀಸ್ ರವರೊಂದಿಗೆ ಸಂಪರ್ಕಿಸಿ ಅನಧಿಕೃತವಾಗಿ ನಿಂತಿರುವ ವಾಹನಗಳನ್ನು ತೆರವುಗೊಳಿಸಲು ಕ್ರಮ ವಹಿಸುವಂತೆ ಸೂಚಿಸಿದರು ಹಾಗೂ ಕಿರಿಯ ಮತ್ತು ಹಿರಿಯ ಆರೋಗ್ಯ ಪರಿವೀಕ್ಷಕರು ಈ ಬಗ್ಗೆ ಪರಿಶೀಲಿಸಿ ಸದರಿ ಜಾಗದಲ್ಲಿ ಕಸ ವಿಲೇವಾರಿಯ ಬಗ್ಗೆ ಗಮನ ಹರಿಸುವಂತೆ ಸೂಚನೆ ನೀಡಿದರು

ಕ್ರಮ: ವಾರ್ಡಿನ ಅಭಿಯಂತರರು ಹಿರಿಯ ಆರೋಗ್ಯ ಪರಿವೀಕ್ಷರು
ಕಿರಿಯ ಆರೋಗ್ಯ ಪರಿವೀಕ್ಷರು ಮತ್ತು ಮಾರ್ಷಲ್ ರವರು



Scanned with CamScanner

5. ವಾರ್ಡ್ 153ರ ಸ್ಥಳೀಯರಾದ ಶ್ರೀ. ಮಿಥುನ್ ರವರು ಮಾತನಾಡಿ 9ನೇ ಮುಖ್ಯರಸ್ತೆಯಲ್ಲಿ ಅಪರಿಚಿತ ವ್ಯಕ್ತಿಗಳು ರಾತ್ರಿ ವೇಳೆಯಲ್ಲಿ ಅನೈತಿಕ ಚಟುವಟಿಕೆಗಳು ನಡೆಸುತ್ತಿರುವ ಬಗ್ಗೆ ಸಭೆಗೆ ತಿಳಿಸಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಸಭೆಯಲ್ಲಿ ಹಾಜರಿದ್ದ, ಸಿದ್ದಾಪುರ ಪೊಲೀಸ್ ಠಾಣೆಯ ಎ.ಎಸ್.ಐ ರವರಿಗೆ ಈ ಬಗ್ಗೆ ರಾತ್ರಿ ವೇಳೆಯಲ್ಲಿ ತಮ್ಮ ಇಲಾಖೆಯ ಸಿಬ್ಬಂದಿಯನ್ನು ಗಸ್ತು ಮಾಡಲು ಸೂಚನೆ ನೀಡಿ ಈ ಬಗ್ಗೆ ಕ್ರಮ ವಹಿಸುವಂತೆ ತಿಳಿಸಿದರು.

ಕ್ರಮ : ಸಿದ್ಧಾಪುರ ಪೊಲೀಸ್ ಠಾಣೆ

6. ವಾರ್ಡಿನ ಸ್ಥಳೀಯರಾದ ಶ್ರೀ. ಭೀಮಪ್ಪ ರವರು ಮಾತನಾಡಿ ಗುಲ್ಬರ್ಗ ಕಾಲೋನಿ ಮತ್ತು ತಿಲಕ್‌ನಗರ ಮುಖ್ಯರಸ್ತೆಯಲ್ಲಿ ವಿದ್ಯುತ್ ಕಂಬ ಭಾಗಿರುವ ಬಗ್ಗೆ ಪ್ರಸ್ತಾಪಿಸಿ ಇದನ್ನು ಸರಿಪಡಿಸಲು ತಿಳಿಸಿದರು. ಈ ವಿಷಯವಾಗಿ ನೋಡಲ್ ಅಧಿಕಾರಿಯವರು ಮಾತನಾಡಿ ಸಂಬಂಧಪಟ್ಟ ಬೆಸ್ಕಾಂ ಇಂಜಿನಿಯರ್‌ರವರು ಕೂಡಲೇ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲು ತಿಳಿಸಿದರು

ಕ್ರಮ : ಬೆಸ್ಕಾಂ ಇಲಾಖೆ.

7. ನೋಡಲ್ ಅಧಿಕಾರಿಯವರು ಮಾತನಾಡಿ ಬಿ.ಹೆಚ್.ಇ.ಎಲ್ ಲೇಔಟ್ ಬಳಿಯ ಚಿಕನ್‌ಕೌಂಟಿ ಮತ್ತು ಫ್ಯಾಮಿಲಿ ಮಾರ್ಟ್ ಬಳಿ ಅನಧಿಕೃತ ವಾಹನಗಳನ್ನು ನಿಲ್ಲಿಸುತ್ತಿರುವ ಬಗ್ಗೆ ಸಭೆಯಲ್ಲಿ ಹಾಜರಿದ್ದ, ಮೈಕೋ ಲೇಔಟ್ ಸಂಚಾರ ಪೊಲೀಸ್ ಅಧಿಕಾರಿಗಳಿಗೆ ಈ ಬಗ್ಗೆ ಕೈಗೊಂಡ ಕ್ರಮದ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದರು. ಈ ವಿಷಯವಾಗಿ ಮೈಕೋ ಲೇಔಟ್ ಸಂಚಾರ ಪೊಲೀಸ್ ಅಧಿಕಾರಿಗಳು ಪ್ರತಿನಿತ್ಯ ಸದರಿ ಜಾಗಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ತಿಳಿಸಿದರು.

ಕ್ರಮ : ಮೈಕೋಲೇಔಟ್ ಪೊಲೀಸ್ ಠಾಣೆ.



Scanned with CamScanner

8. ನೋಡಲ್ ಅಧಿಕಾರಿಯವರು ಮಾತನಾಡಿ ಕೋವಿಡ್ ಪ್ರಕರಣಗಳು ದಿನೇ ದಿನೇ ಹೆಚ್ಚಾಗುತ್ತಿದ್ದು, ಈ ಬಗ್ಗೆ ಮುನ್ನೆಚ್ಚರಿಕಾ ಕ್ರಮಗಳನ್ನು ವಹಿಸುವಂತೆ ಸಂಬಂಧಪಟ್ಟ ಎಲ್ಲಾ ಇಲಾಖೆಯವರು ಸೂಕ್ತ ಕ್ರಮ ವಹಿಸುವಂತೆ ಸೂಚನೆ ನೀಡಿದರು. ಈ ವಿಷಯವಾಗಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ ವರ್ಗದವರು ಗಮನ ಹರಿಸುವುದಾಗಿ ತಿಳಿಸಿದರು.

ಮೇಲಿನ ಎಲ್ಲಾ ಅಂಶಗಳನ್ನು ಕ್ರಮಬದ್ಧವಾಗಿ ನಿರ್ವಹಿಸಲು ಹಾಜರಿದ್ದ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ತಿಳಿಸಿ ಮುಂದಿನ ಸಭೆಗೆ ಕಡ್ಡಾಯವಾಗಿ ಗೈರುಹಾಜರಾಗಿರುವ ಇತರೆ ಇಲಾಖೆಯವರು ಪಾಲ್ಗೊಂಡು ಮಾನ್ಯ ಆಯುಕ್ತರು (ಬಿಬಿಎಂಪಿ) ರವರು ವಹಿಸಿರುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಎಲ್ಲರೂ ಸಹಕರಿಸಬೇಕೆಂದು ತಿಳಿಸುತ್ತಾ ಸಭೆ ಮುಕ್ತಾಯಗೊಳಿಸಲಾಯಿತು.

(ನವೀನ್‌ಕುಮಾರ್ ಕೆ.)
ಕಾರ್ಯದರ್ಶಿ
ವಾರ್ಡ್–153 ಜಯನಗರ

(ವರಲಕ್ಷ್ಮಮ್ಮ ಎಲ್)
ನೋಡಲ್ ಅಧಿಕಾರಿ
ವಾರ್ಡ್–153 ಜಯನಗರ



Scanned with CamScanner